**ಸಾಕ್ಷಿಗೆ ದಿನಾಂಕ 04.10.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎಸ್.ಜಿ.ಆರ್. ವಕೀಲರಿಂದಃ**

1. ನನಗೆ 27 ವರ್ಷ ವಯಸ್ಸಾಗಿದೆ. ನನ್ನ ಜನ್ಮ ದಿನಾಂಕ ನೆನಪಿಲ್ಲ ಆದರೆ 1998 ರಲ್ಲಿ ನನ್ನ ಜನನವಾಗಿರುತ್ತದೆ. ಅಪಘಾತವಾದ ದಿನ ನಾನು ಹಾರೋನಹಳ್ಳಿಯ ಮೆಡಿಕಲ್ ಸ್ಟೋರ್ ಕಡೆಗೆ ನನಗೆ ಸೇರಿದ ದ್ವಿಚಕ್ರ ವಾಹನದಲ್ಲಿ ನಾನು ಒಬ್ಬನೇ ಹೋಗುತ್ತಿದ್ದೇನು. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನಾ ಪರವಾನಗಿ ಪತ್ರ ಇರುತ್ತದೆ. ಸದರಿ ಚಾಲನಾ ಪರವಾನಗಿಪತ್ರವನ್ನು ಹಾಜರುಪಡಿಸಬಲ್ಲೇನು. ಸದರಿ ಚಾಲನಾ ಪರವಾನಗಿ ಪತ್ರವನ್ನು ಎಆರ್.ಟಿ.ಓ. ದೇವನಹಳ್ಳಿರವರ ಬಳಿ ಎರಡು ವರ್ಷಗಳ ಹಿಂದೆ ಮಾಡಿಸಿರುತ್ತೇನೆ. ಚಾಲನಾ ಪರವಾನಗಿ ಪತ್ರದ ಸಂಖ್ಯೆ ನೆನಪಿಲ್ಲ. ನನಗೆ ಯಾವುದೇ ಚಾಲನಾ ಪರವಾನಗಿ ಪತ್ರ ಇಲ್ಲದೇ ಇರುವ ಕಾರಣ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ಅಪಘಾತವಾದ ಮೂರು ದಿನಗಳ ನಂತರ ನನ್ನ ತಾಯಿ ದೂರನ್ನು ನೀಡಿರುತ್ತಾರೆ. ಅಪಘಾತದವಾದ ದಿನವೇ ದೂರನ್ನು ನೀಡಲು ತೊಂದರೆ ಇರಲಿಲ್ಲ ಎಂದರೆ ಆ ದಿನ ತಾಯಿಗೆ ಆರೋಗ್ಯ ಸರಿಯಿರಲಿಲ್ಲ. ನನ್ನ ತಾಯಿ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ. ಒಂದನೇ ಎದುರುದಾರರಿಗೆ ಸೇರಿದ ಆಪಾದಿತ ಲಾರಿ ನನಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನ ನನ್ನ ದ್ವಿಚಕ್ರ ವಾಹನವನ್ನು ಅತೀವೇಗ ಹಾಗು ಅಜಾಗರೂಕತೆಯಿಂದ ಚಲಾಯಿಸಿ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಸ್ವತಃ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆ ಎಂದು ದೂರು ನೀಡಿದರೆ ನನಗೆ ಪರಿಹಾರ ಸಿಗಲಾರದು ಎಂಬ ಕಾರಣದಿಂದ ಒಂದನೇ ಎದುರುದಾರರ ಲಾರಿ ಅಪಘಾತಪಡಿಸಿದೆ ಎಂದು ಸುಳ್ಳು ದೂರು ನೀಡಿರುತ್ತೇನೆ

ಎಂದರೆ ಸರಿಯಲ್ಲ. ಲಾರಿಯನ್ನು ಅಪಘಾತ ಪ್ರಕರಣದಲ್ಲಿ ಅಳವಡಿಸುವ ಕಾರಣದಿಂದ ಮೂರು ದಿನಗಳ ಕಾಲ ತಡವಾಗಿ ದೂರ ನೀಡಿರುತ್ತೇವೆ ಎಂದರೆ ಸರಿಯಲ್ಲ. ಒಂದನೇ ಎದುರುದಾರರು ನನಗೆ ಪರಿಚಯಸ್ತರು.

3. ಅಪಘಾತದ ನಂತರ ಸೆವೆನ್ ಹಿಲ್ಸ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಅಪಘಾತದ ಹಿನ್ನಲೆಯನ್ನು ತಿಳಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ 7 ದಿನಗಳ ಕಾಲ ಒಳರೋಗಿಯಾಗಿದ್ದೇನು. ನನಗೆ ಬಲಗಾಲು ಮತ್ತು ಬಲಗೈ ಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಸದರಿ ಗಾಯಗಳು ವಾಸಿಯಾಗಿವೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಸಣ್ಣಪುಟ್ಟ ಗಾಯಗಳು ಮಾತ್ರ ಆಗಿದ್ದವು ಎಂದರೆ ಸರಿಯಲ್ಲ. ನನ್ನ ವೈದ್ಯಕೀಯಕ್ಕೆ ರೂ.2,00,000/- ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೆವೆನ್ ಹಿಲ್ಸ್ ಆಸ್ಪತ್ರೆಯ ಎಂ ಎಲ್ ಸಿ ಯನ್ನು ಹಾಜರುಪಡಿಸುತ್ತೇನೆ.

4. ನಾನು ಈಗ ಯಾವುದೇ ಕೆಲಸ ಮಾಡುತ್ತಿರುವುದಿಲ್ಲ. ಅಪಘಾತಕ್ಕಿಂತ ಮುಂಚೆ ನಾನು ಎಲೆಕ್ಟ್ರೀಶಿಯನ್ ಕೆಲಸ ಮಾಡುತ್ತಿದ್ದೆ ಮತ್ತು ತಿಂಗಳಿಗೆ ರೂ.20,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ.12 ವೈದ್ಯಕೀಯ ಬಿಲ್ಲುಗಳು ಸೃಷ್ಟಿತ ಬಿಲ್ಲುಗಳು ಎಂದರೆ ಸರಿಯಲ್ಲ. ಸದರಿ ಬಿಲ್ಲುಗಳನ್ನು ನೀಡಿದವರ ಸಾಕ್ಷ್ಯ ಮಾಡಿಸುತ್ತೇನೆ. ವೈದ್ಯಕೀಯ ಬಿಲ್ಲುಗಳನ್ನು ಮರುಪಾವತಿ ಮಾಡಿಕೊಂಡಿರುವುದಿಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಒಂದನೇ ಎದುರುದಾರರು ನನಗೆ ಪರಿಚಯದವರು ಆಗಿರುವುದರಿಂದ ನಾನು, ಒಂದನೇ ಎದುರುದಾರರು ಮತ್ತು ಪೊಲೀಸರು ಶಾಮೀಲಾಗಿ ಲಾರಿಯನ್ನು

ಪ್ರಕರಣದಲ್ಲಿ ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1ನೇ ಎದುರುದಾರರ ಪರ ವಕೀಲರು ಕಾಲವಕಾಶ ಕೋರಿರುತ್ತಾರೆ. ಆದುದರಿಂದ ಮುಂದುವರೆದ** ಪಾ**ಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**